2006

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಜಿಲ್ಲೆ, ಮಧುಗಿರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಲಾಗಿರುವ ಮಾಸ್ಟರ್ ಪ್ಲಾನ್‌ಗೆ ಅಂತಿಮ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 26 ಬೆಂರೂಪ್ರಾ 2001, ದಿನಾಂಕ: 20.3.2001.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 20 ಬೆಂರೂಪ್ರಾ 2003, ದಿನಾಂಕ: 20.2.2003.
3. ಮುಖ್ಯಾಧಿಕಾರಿ, ಪುರಸಭೆ ಯೋಜನಾ ಪ್ರಾಧಿಕಾರ, ಪುರಸಭೆ, ಮಧುಗಿರಿ ಇವರ ಪತ್ರ ಸಂಖ್ಯೆ: ಮಸಯೋಪ್ರಾ:ಮಧುಗಿರಿ: ಮಾಪ್ಲಾ:2005-06/18, ದಿನಾಂಕ: 24.1.2006.
4. ನಗರ ಯೋಜನಾ ನಿರ್ದೇಶಕರ ಟಿಪ್ಪಣಿ ಸಂಖ್ಯೆ: ನಯೋ (21):ಮಾ.ಪ್ಲಾನ್:ಅಂತಿಮ:ಮಧುಗಿರಿ:738:2005-06, ದಿನಾಂಕ: 24.2.2006.

ಪ್ರಸ್ತಾವನೆ:

1. ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಸರ್ಕಾರವು ಮಧುಗಿರಿ ಪುರಸಭೆಯನ್ನು ಸ್ಥಳೀಯ ಯೋಜನಾ ಪ್ರಾಧಿಕಾರವೆಂದು ಘೋಷಿಸಿರುತ್ತದೆ. ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ ಮಧುಗಿರಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಮುಖ್ಯಾಧಿಕಾರಿ, ಪುರಸಭೆ, ಮಧುಗಿರಿ ಇವರು ಮಧುಗಿರಿ ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ಮಾಸ್ಟರ್ ಪ್ಲಾನ್‌ಗೆ ಸರ್ಕಾರದ ಅಂತಿಮ ಅನುಮೋದನೆ ಪಡೆಯಲು ಯೋಜನೆಯ ನಕ್ಷೆಗಳ ಮತ್ತು ವರದಿಗಳನ್ನು ಕಳುಹಿಸಿರುತ್ತಾರೆ. ಅದರಂತೆ ಮುಂದಿನ 20ವರ್ಷಗಳ ಯೋಜನಾ ಅವಧಿಗೆ ಅಂದರೆ 2021ರ ವೇಳೆಗೆ ಜನಸಂಖ್ಯೆಯು 40000 ಆಗಬಹುದೆಂದು ಅಂದಾಜಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಪ್ರಕರಣ 12 (ಕರ್ನಾಟಕ ನಗರ ಮತ್ತು ಗ್ರಾಮಾಂತರ (ತಿದ್ದುಪಡಿ) ಕಾಯ್ದೆ, 2004 ರಂತೆ) ರಲ್ಲಿ ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಿ 'ಮಾಸ್ಟರ್ ಪ್ಲಾನ್' ನ್ನು ರೂಪಿಸಲಾಗಿದೆ ಹಾಗೂ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಅಗತ್ಯ ವಲಯ ನಿಯಮಾವಳಿಗಳನ್ನು ರಚಿಸಲಾಗಿದೆ.

(21)

3. ಯೋಜನೆಯಲ್ಲಿ ಭವಿಷ್ಯದ ಬೆಳವಣಿಗೆಗಾಗಿ ಒಟ್ಟು 402.44 ಹೆಕ್ಟೇರ್ ಪ್ರದೇಶವನ್ನು ಪ್ರಸ್ತಾವಿಸಲಾಗಿದ್ದು, ಇದರಲ್ಲಿ ವಸತಿಗಾಗಿ 226.62 ಹೆಕ್ಟೇರ್, ವಾಣಿಜ್ಯಕ್ಕಾಗಿ 6.92 ಹೆಕ್ಟೇರ್, ಕೈಗಾರಿಕೆಗಾಗಿ 7.99 ಹೆಕ್ಟೇರ್, ಸಾರ್ವಜನಿಕ/ ಅರೆ ಸಾರ್ವಜನಿಕ ಉದ್ದೇಶಕ್ಕಾಗಿ 28.87 ಹೆಕ್ಟೇರ್, ಉದ್ಯಾನ ಮತ್ತು ಬಯಲು ಜಾಗಗಾಗಿ 33.57 ಹೆಕ್ಟೇರ್, ನಾಗರೀಕ ಸೌಲಭ್ಯಕ್ಕಾಗಿ 6.77 ಹೆಕ್ಟೇರ್ ಹಾಗೂ ಸಾರಿಗೆ ಮತ್ತು ಸಂಪರ್ಕಕ್ಕಾಗಿ 85.20 ಹೆಕ್ಟೇರ್ ಪ್ರದೇಶವನ್ನು ಕಾಯ್ದಿರಿಸಲಾಗಿದೆ.

4. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 13(1) ರನ್ವಯ ಸರ್ಕಾರವು ಮಧುಗಿರಿ ಸ್ಥೂಲಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನ ನೀಡಿದ್ದು, ಈ ಬಗ್ಗೆ ಪ್ರಾಧಿಕಾರವು ಸಾರ್ವಜನಿಕರ ಸಲಹೆ:ಆಕ್ಷೇಪಣೆಗಳನ್ನು ಆಹ್ವಾನಿಸಿ ದಿನಾಂಕ: 22.9.2003ರ 'ಪ್ರಜಾ ಪ್ರಗತಿ' ದಿನ ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿರುತ್ತದೆ. ತತ್ಸಂಬಂಧ ಒಂದು ತಿಂಗಳ ಅವಧಿಯೊಳಗೆ ಸ್ವೀಕೃತವಾದ ಮನವಿ ಗಳನ್ನು ದಿನಾಂಕ: 13.2.2004 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ, ತೀರ್ಮಾನವಾದಂತೆ ಕೆಳಕಂಡ ಬದಲಾವಣೆಗಳನ್ನು ಅಳವಡಿಸಿ ಮಾಸ್ಟರ್ ಪ್ಲಾನ್‌ನ್ನು ಅಂತಿಮ ಅನುಮೋದನೆ ನೀಡಲು ಸಲ್ಲಿಸಿರುತ್ತಾರೆ.

ಅ) ಗುರುವಡೇರಹಳ್ಳಿ ಸ.ನಂ: 21, 52, 24, 80, 78 ರಲ್ಲಿ ಪ್ರಸ್ತಾಪಿಸಲಾಗಿದ್ದ 18 ಮೀ ರಸ್ತೆಯನ್ನು ಹಲವಾರು ಅಭಿವೃದ್ಧಿಗಳು ಇರುವ ಹಿನ್ನೆಲೆಯಲ್ಲಿ ಈ ರಸ್ತೆಯನ್ನು ದಕ್ಷಿಣಕ್ಕೆ ಸ.ನಂ:45, 47, 52, 60, 93, 91ರ ಮೂಲಕ ಹಾದುಹೋಗುವಂತೆ ರಸ್ತೆ ಪಂಕ್ತೀಕರಣ ಪ್ರಸ್ತಾಪಿಸಿರುವುದನ್ನು ಒಪ್ಪಲಾಗಿದೆ.

ಆ) ಹೊಸ ಬೆಳವಣಿಗೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಲಿಂಗೇನಹಳ್ಳಿ ಗ್ರಾಮದ ಸ.ನಂ: 100, 14, 15, 16, 17, 18 ನ್ನು ಹಳ್ಳದವರೆಗೆ ವಸತಿಗೆ ಕಾಯ್ದಿರಿಸಿರುವುದನ್ನು ಒಪ್ಪಲಾಗಿದೆ.

ಇ) ಹೊಸ ಅಭಿವೃದ್ಧಿಗಳು ಬರುತ್ತಿರುವ ಹಿನ್ನೆಲೆಯಲ್ಲಿ ಶಿರಾ ರಸ್ತೆಯಲ್ಲಿನ ಸ.ನಂ. 121, 122, 124, 125, 126 ನ್ನು ವಸತಿಗೆ ಕಾಯ್ದಿರಿಸಿದ್ದು ಇದನ್ನು ಒಪ್ಪಲಾಗಿದೆ.

ಈ) ಗುರುವಡೇರಹಳ್ಳಿ ಸ.ನಂ. 28, 29, 30, 34, 25ರ ಜಮೀನುಗಳಲ್ಲಿ ವಸತಿ ಬೆಳವಣಿಗೆಗಳು ಬಂದಿರುವುದರಿಂದ ಉದ್ಯಾನ ಮತ್ತು ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವುದನ್ನು ವಸತಿಗೆ ಬದಲಾಯಿಸಿದ್ದು ಇದನ್ನು ಒಪ್ಪಲಾಗಿದೆ.

ಉ) ಎಂ.ಎಸ್.ಬಿ ರಸ್ತೆ ಹಾಗು ವಿ.ಎಸ್.ಬಿ ರಸ್ತೆಯ ಎರಡು ಬದಿಗಳನ್ನು ವಾಣಿಜ್ಯಕ್ಕೆ ಕಾಯ್ದಿರಿಸಿರುವುದನ್ನು ಒಪ್ಪಲಾಗಿದೆ.

5. ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 32 ಬೆಂರೂಪ್ರಾ 2006, ಬೆಂಗಳೂರು,**
**ದಿನಾಂಕ:10.4.2006.**

ಪ್ರಸ್ತಾವನೆಯಲ್ಲಿ ವಿವರಿಸಿರುವ ನಿಬಂಧನೆಗಳಿಗೊಳಪಟ್ಟು ಮಧುಗಿರಿ ಸ್ಥಳೀಯ ಯೋಜನಾ ಪ್ರದೇಶದ ಮಾಸ್ಟರ್ ಪ್ಲಾನ್‌ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 13(3) ರನ್ವಯ (ಕರ್ನಾಟಕ ನಗರ ಮತ್ತು ಗ್ರಾಮಾಂತರ (ತಿದ್ದುಪಡಿ) ಕಾಯ್ದೆ, 2004 ರಂತೆ) ಅಂತಿಮ ಅನುಮೋದನೆ ನೀಡಿದೆ.

ಮಾಸ್ಟರ್ ಪ್ಲಾನ್‌ಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ಎಲ್ಲಾ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

10/4/06
(ಎನ್.ವ್ಯ.ಸಾಗರ),
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಪ್ರಕಟಣೆಗಾಗಿ ಹಾಗು ಪ್ರಕಟಿಸಿದ 100 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲು ಕೋರಿದೆ.

ಪ್ರತಿ:

1. ನಗರ ಯೋಜನಾ ನಿರ್ದೇಶಕರು, ಬೆಂಗಳೂರು,
2. ಮುಖ್ಯಾಧಿಕಾರಿಗಳು, ಸ್ಥಳೀಯ ಯೋಜನಾ ಪ್ರಾಧಿಕಾರ, ಪುರಸಭೆ, ಮಧುಗಿರಿ,
3. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
4. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ
5. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.